ಶ್ರೀ ಜಿ.ಬಿ. ಶಂಕರರಾವ್.—ಬಡ್ಜೆಟ್ ಅಧಿವೇಶನಕ್ಕೆ ಮುಂಚಿತವಾಗಿ ಸಲಹಾ ಸಮಿತಿಗಳನ್ನು ಕರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ ಎಚ್. ರಂಗನಾಥ್.—ಆಯಾ ಮಂತ್ರಿಗಳು ಕಾಲವನ್ನು ನೋಡಿಕೊಂಡು ಕರೆಯುತ್ತಾರೆ. ನಾನು ಇಂಥಾ ಕಾಲದಲ್ಲೇ ಕರೆಯಬೇಕು ಎಂದು ಹೇಳತಕ್ಕಂಥಾದ್ದು ಸರಿ ಕಾಣುವುದಿಲ್ಲ. ಅನುಕೂಲ ವನ್ನು ನೋಡಿಕೊಂಡು ಆ ಇಲಾಖೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಕರೆಯುತ್ತಾರೆ.

## Funds sanctioned for Public Works Division, Hassan

969 SRI B.H. LAKSHMANAIAH (Belur).—Will the Minister for Public Works be pleased to state:—

the total amount sanctioned for Public Works Division, Hassan for the last Five Years and distribution of funds made to each sub-Division under Roads, Bridges, and Buildings?

SRI S. BANGARAPPA (Minister for Public Works).—

5 Statements showing the total amount sanctioned and the Sub-Division-wise grant for the last 5 years from 1974-75 to 1978-79 is placed on the Table.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಮಂತ್ರಿಗಳು ಒದಗಿಸಿರತಕ್ಕಂಥ ೫ ವರ್ಷದ ಹಣದ ಹಂಚಿಕೆಯನ್ನು ನೋಡಿದರೆ ಹಾಸನ ಸಬ್ ಡಿವಿಜನ್‌ಗೆ ಪಿ.ಡಬ್ಲ್ಯು.ಡಿ. ಕೆಲಸಗಳಿಗಾಗಿ ತಾವು ಲಕ್ಷಗಟ್ಟಲೆ ಕೊಟ್ಟಿದ್ದೀರಿ. ಬೇರೆ ಬೇರೆ ಸಬ್ ಡಿವಿಜನ್‌ಗಳಿಗೆ ಸಾವಿರಗಟ್ಟಲೆ ಕೊಟ್ಟಿದ್ದೀರಿ ಇದಕ್ಕೆ ಕಾರಣವೇನು ?

† ಶ್ರೀ ಎಸ್. ಬಂಗಾರಪ್ಪ.—ಯಾವ ಯಾವ ಸಬ್ ಡಿವಿಜನ್‌ನಲ್ಲಿ ಏನೇನು ಕೆಲಸಗಳನ್ನ ತೆಗೆದು ಕೊಳ್ಳಬೇಕು ಎಂದು ಆಯ್ಕೆಗೆ ಅನುಗುಣವಾಗಿ ಕೆಲಸಕಾರ್ಯಗಳು ಮುಂಜೂರಾಗಿರುತ್ತವೆ. ಆದುದರಿಂದ ಸಹಜವಾಗಿ ಒಂದು ಕಡೆಯಲ್ಲಿ ಜಾಸ್ತಿ ಇರುತ್ತದೆ, ಒಂದು ಕಡೆಯಲ್ಲಿ ಕಡಿಮೆ ಇರುತ್ತದೆ, ಸರಿಸಮಾನ ವಾಗಿ ಹೋಗಬೇಕು ಎಂಬ ಉದ್ದೇಶವಿದ್ದರೂ ಕೂಡ ಉದಾಹರಣೆಗೆ ಹೇಳುವುದಾದರೆ, ನದಿ ಒಂದು ಸಬ್ ಡಿವಿಜನ್‌ನಲ್ಲಿ ಹರಿಯುತ್ತದೆ, ಅಲ್ಲಿ ಸಹಜವಾಗಿ ಜಾಸ್ತಿ ಖರ್ಚಾಗುತ್ತದೆ, ಪಕ್ಕದ ಡಿವಿಜನ್‌ನಲ್ಲಿ ಕಡಿಮೆಯಾಗುತ್ತದೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಅದು ಒಂದು ವರ್ಷಕ್ಕಾದರೆ ತಾವು ಹೇಳಿದ ಮಾತನ್ನು ಒಪ್ಪಿ ಕೊಳ್ಳಬೇಕಾಗುತ್ತದೆ. ಆದರೆ ತಾವು ೫ ವರ್ಷಗಳಿಗೆ ಹಣವನ್ನು ಹಂಚಿದ್ದೀರಿ. ಪ್ರತಿವರ್ಷ ಹಾಸನ ಸಬ್ ಡಿವಿಜನ್‌ನಲ್ಲಿ ಕೆಲಸ ಜಾಸ್ತಿ ಇರುತ್ತದೆ, ಹಾಸನ ತಾಲ್ಲೂಕು ಬೇರೆ ತಾಲ್ಲೂಕುಗಳಿಗಿಂತ ದೊಡ್ಡ ತಾಲ್ಲೂಕು. ಇದನ್ನು ಏಕೆ ನಿರ್ಲಕ್ಷ್ಯ ಮಾಡಿದ್ದೀರಿ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ವಿಷಯದಲ್ಲಿ ನನಗೆ ಸತ್ಯ ಸ್ವಲ್ಪ ಕಾಣುತ್ತದೆ, ಇಲ್ಲ ಎಂದಲ್ಲ. ಈಗ ತಾಲ್ಲೂಕಿನ ವಿಸ್ತರಣದ ದೃಷ್ಟಿಯಿಂದ ಕೆಲವೊಮ್ಮೆ ಸಣ್ಣ ತಾಲ್ಲೂಕಿನಲ್ಲಿ ಜಾಸ್ತಿ ಖರ್ಚಾಗಿ, ದೊಡ್ಡ ತಾಲ್ಲೂಕಿನಲ್ಲಿ ಕಡಿಮೆ ಖರ್ಚಾಗುವುದು ಉಂಟು. ಆದು ಸಣ್ಣ ತಾಲ್ಲೂಕು ಆದರೂ ಕೂಡ ಖರ್ಚು ಜಾಸ್ತಿ ಬರುತ್ತದೆ ದೊಡ್ಡ ತಾಲ್ಲೂಕಿಗೆ ಕಡಿಮೆ ಖರ್ಚು ಬರುತ್ತದೆ. ಕೆಲವು ಕಡೆ ನಿರ್ಲಕ್ಷ್ಯ ತೋರಿಸುತ್ತೀರಿ ಎಂದು ಮಾನ್ಯ ಸದಸ್ಯರು ಹೇಳಿದರು. ನಿರ್ಲಕ್ಷ್ಯ ಎನ್ನುವ ಮಾತನ್ನು ನಾನು ಹೇಳದೇ ಇದ್ದರೂ ಕೂಡ ಕೆಲವು ಕಡೆಗಳಲ್ಲಿ ಕಡಿಮೆ ಖರ್ಚಾಗಿದೆ ಕೆಲಸಕಾರ್ಯಗಳು ಕಡಿಮೆ ಯಾಗಿದೆ ಎನ್ನುವುದು ಸತ್ಯ. ಆದಷ್ಟು ಜಾಸ್ತಿ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಈಗ ಮಾಸ್ಟರ್ ಪ್ಲಾನ್ ಸಿದ್ಧಮಾಡಿಟ್ಟುಕೊಂಡಿದ್ದೇವೆ. ಮುಂದೆ ಹಣದ ಲಭ್ಯತೆ ಯನ್ನನುಸರಿಸಿ ಜಾಸ್ತಿ ತೆಗೆದುಕೊಂಡು ಹೋಗತಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—೧೯೭೮-೭೯ನೇ ಸಾಲಿಗೆ ೫ ಸಬ್ ಡಿವಿಜನ್‌ಗಳಿಗೆ ೭೬ ಲಕ್ಷದ ೭೨ ಸಾವಿರ ರೂಪಾಯಿಗಳ ಹಣವನ್ನು ಒದಗಿಸಿದ್ದಾರಿ. ಈ ಪೈಕಿ ಎಷ್ಟು ಹಣ ಖರ್ಚಾಗಿದೆ. ನನ್ನ ತಾಲ್ಲೂಕಿನಮಟ್ಟಿಗೆ ಹೇಳುವುದಾದರೆ, ಇನ್ನೂ ೫ ಲಕ್ಷ ರೂಪಾಯಿಗಳ ಬಿಲ್ಸ್ ಮಾರ್ಚ್‌ಯಿಂದ ಪಾವತಿಯಾಗಿಲ್ಲ. ಈ ರೀತಿ ಪಾವತಿಯಾಗದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಮಗೆಲ್ಲಾ ಗೊತ್ತಿರುವಹಾಗೆ, ಲೆಟರ್ ಆಫ್ ಕ್ರೆಡಿಟ್ ಸಿಸ್ಟಂನ್ನು ಇಟ್ಟಿದ್ದೇವೆ. ಹಣವನ್ನು ರಿಲೀಸ್ ಮಾಡದೇ ಇರುವುದಕ್ಕೆ ಕಾರಣವೇನೆಂದರೆ, ಫೈನಾನ್ಷಿಯಲ್ ಡಿಸಿಪ್ಲಿನ್ ಉಳಿಯಬೇಕು ಎನ್ನುವ ದೃಷ್ಟಿಯಿಂದ ಮಾಡಬೇಕಾಗುತ್ತದೆ, ಕೆಲವೊಮ್ಮೆ ಶಾಸಕರು ಅರ್ಜೆಂಟಾಗಿ ಕೆಲಸವಾಗಬೇಕು, ತಡೆಯುವುದಕ್ಕಾಗುವುದಿಲ್ಲ ಎಂದು ಹೇಳಿಬಿಡುತ್ತಾರೆ, ಅಂಥಾದ್ದನ್ನು ನಾವು ಬಡ್ಜೆಟ್ಟಿಗೆ ಸೇರಿಸುವಹಾಗಿಲ್ಲಿ. ಅರ್ಜೆಂಟಾಗೆ ಮಾಡಬೇಕಾಗಿರುತ್ತದೆ, ಕೆಲವೊಮ್ಮೆ ಶಾಸಕರೇ ಹೇಳಿರುತ್ತಾರೆ, ಸಾರ್ವಜನಿಕರೇ ಹೇಳಿರುತ್ತಾರೆ, ಸಚಿವರೇ ಹೇಳಿರುತ್ತಾರೆ, ಅಂಥ ಕೆಲಸ ಕಾರ್ಯಗಳನ್ನು ನಾವು ತೆಗೆದುಕೊಳ್ಳಬೇಕಾಗಿರುತ್ತದೆ. ಎಲ್.ಓ.ಸಿ. ಇಷ್ಟು ಎಷ್ಟು ಮಾಡುತ್ತಾರೋ ಅಷ್ಟು ಮಾತ್ರ ಮಾಡಬೇಕಾಗಿತ್ತು ಆರೀತಿ ಮಾಡದೇ ಇದ್ದುದರಿಂದ ಕೆಲಸ ಜಾಸ್ತಿಯಾಗಿ ಕಡಿಮೆಯಾಗಿದೆ. ಆದುದರಿಂದ ಇದು ಬಿಲ್ಸ್ ಪೆಂಡಿಂಗ್ ಇರುವುದಕ್ಕೆ ಕಾರಣವಾಗಿದೆ. ಇದನ್ನು ನೋಡಿ ನಾನು ನಮ್ಮ ಆಫೀಸರಿಗೆ ಸರಿಯಾದ ನಿರ್ದೇಶನವನ್ನು ಕೊಟ್ಟಿದ್ದೇನೆ. ಏನೆಂದರೆ, ಇಡೀ ರಾಜ್ಯದಲ್ಲಿ ಎಷ್ಟು ಎಲ್.ಓ.ಸಿ. ಎಷ್ಟು ಇಷ್ಟೂ ಮಾಡುತ್ತಾರೋ ಅಷ್ಟೇ ಮಾಡಬೇಕು, ಉಳಿದದ್ದನ್ನು ಮಾಡಬಾರದು ಎಂದು ಹೇಳಿದ್ದೇನೆ. ಈಗ ಆಗಿರುವುದನ್ನು ಸರಿಪಡಿಸುತ್ತೇವೆ. ಈಗ ಬಿಲ್ಸ್ ಏನು ಪೆಂಡಿಂಗ್ ಇದೆ ಆ ಹಣವನ್ನು ಬಡ್ಜೆಟ್ ಪಾಸಾದ ಕೂಡಲೇ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

## Inter-State Seniority list of Revenue Officials

907 SRI M. MADAIAH (Santhemarahalli).—Will the Minister for Revenue be pleased to state:—

(a) whether the Inter—State Seniority lists of the Revenue Officials the Division below the rank of Deputy Tahsildars have been finalised;

(b) if not the reason why it has been delayed since 1956;

(c) how many officials have died ;

(d) how many have retired;

(e) how many are about to retire;

(f) when the Govt., hope to finalise the gradation lists of these officials?

SRI B. BASAVALINGAPPA (Minister for Revenue).—

(a) Yes.

(b) Does not arise in view of replies to (a) above.

(c) Information not readily available.

d) 4375

(e) 262